# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1042*** |
| ಸದಸ್ಯರ ಹೆಸರು | : | **ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ**<br>**ಶ್ರೀಮತಿ ಭಾರತಿ ಶೆಟ್ಟಿ**<br>(ನಾಮ ನಿರ್ದೇಶನ ಹೊಂದಿದವರು) +<br>**ಶ್ರೀಮತಿ ಉಮಾಶ್ರೀ**<br>(ನಾಮ ನಿರ್ದೇಶನ ಹೊಂದಿದವರು) +<br>**ಶ್ರೀ ಶರವಣ ಟಿ.ಎ.**<br>(ವಿಧಾನ ಸಭೆಯಿಂದ ಚುನಾಯಿತರಾದವರು)<br>**ಶ್ರೀ ಗೋವಿಂದರಾಜು**<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | **23-02-2024.** |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 18 ವರ್ಷ ತುಂಬುವ ಮೊದಲೇ ಹೆಣ್ಣು ಮಕ್ಕಳು ಗರ್ಭ ದರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಪತ್ತೆಯಾಗಿರುವ ಬಾಲಗರ್ಭಿಣಿಯರ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ನೀಡುವುದು ಬಾಲತಾಯಂದಿರ ಆರೋಗ್ಯದ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು: | ಬಂದಿರುತ್ತದೆ.<br><br>ಜಿಲ್ಲೆಗಳಿಂದ ಪಡೆದ ಮಾಹಿತಿಯನ್ವಯ ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ **ಒಟ್ಟು 986** ಬಾಲ ಗರ್ಭಿಣಿಯರು ಮತ್ತು ಬಾಲ ತಾಯಂದಿರ ಪ್ರಕರಣಗಳನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಲಾಗಿದೆ.<br><br>ಬಾಲನ್ಯಾಯ ಕಾಯ್ದೆಯಡಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಗುರುತಿಸಲ್ಪಡುವ ಮಕ್ಕಳನ್ನು ದಾಖಲಿಸಿ ಕೊಳ್ಳುವ ಮೂಲಕ ಮಕ್ಕಳ ಪ್ರಕರಣದ ಅಗತ್ಯತೆಗೆ ಅನುಗುಣವಾಗಿ ನಿಯಮಿತವಾಗಿ ಬಾಲಗರ್ಭಿಣಿಯರಿಗೆ ಮತ್ತು ಬಾಲತಾಯಂದಿರಿಗೆ ಆರೋಗ್ಯ ತಪಾಸಣೆಗೆ ಒಳಪಡಿಸಿ ಇಮ್ಯೂನೈಸೇಷನ್ (ಪ್ರತಿ ರಕ್ಷಣೆ) ನೀಡಲಾಗುವುದು.<br><br>ಕೇಂದ್ರ ಸರ್ಕಾರದ ಪತ್ರ ದಿನಾಂಕ: 30.11.2023ರಲ್ಲಿ Scheme for Care and Support to Victims under Section 4 & 6 of the POCSO Act, 2012 ಎಂಬ ಹೊಸ ಯೋಜನೆಯಡಿ ಬಾಲಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಉಳಿದುಕೊಳ್ಳಲು ಸುರಕ್ಷಿತವಾದ ಸ್ಥಳ, ಆಪ್ತ ಸಮಾಲೋಚನೆ, ಆರೋಗ್ಯ ಸೇವೆಗಳು, ಮಾನಸಿಕ ಹಾಗೂ ಭಾವನಾತ್ಮಕ ಬೆಂಬಲ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ತಾಯಿ ಹಾಗೂ ಮಗುವಿಗೆ ಆರೋಗ್ಯ ವಿಮೆಯನ್ನು ನಿರ್ಭಯ ನಿಧಿಯಡಿ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಯೋಜನೆಯು 2024-25ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| ಆ) | ಹೆಣ್ಣು ಮಕ್ಕಳು 18 ವರ್ಷ ತುಂಬುವ ಮೊದಲೇ ಸಣ್ಣ ವಯಸ್ಸಿನಲ್ಲೇ ತಾಯಿಯಾಗುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು: ಸಣ್ಣ ವಯಸ್ಸಿನಲ್ಲೇ ತಾಯಿಯಾಗುವುದರಿಂದ ತಾಯಿ ಹಾಗೂ ಮಗುವಿನ ಅಪೌಷ್ಟಿಕತೆಯ ಸಮಸ್ಯೆಯ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಶಾಲಾ ಕಾಲೇಜುಗಳಲ್ಲಿ ಮತ್ತು ಭಾಗೀದಾರರಲ್ಲಿ 18 ವರ್ಷ ತುಂಬುವ ಮೊದಲೇ ಸಣ್ಣ ವಯಸ್ಸಿನಲ್ಲೇ ಹೆಣ್ಣು ಮಕ್ಕಳು ತಾಯಿಯಾಗುವುದರಿಂದ ಎದುರಿಸಬೇಕಾದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**<br>ರಾಜ್ಯದಲ್ಲಿ 51 ಮೀಸಲಾತಿ ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ರಾಜ್ಯದಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ 33 ಜಿಲ್ಲಾ ಮಟ್ಟದ ಪೌಷ್ಟಿಕ ಪುನಶ್ಚೇತನ ಕೇಂದ್ರಗಳು ಹಾಗೂ 86 ತಾಲ್ಲೂಕು ಮಟ್ಟದ ಪೌಷ್ಟಿಕ ಪುನಶ್ಚೇತನ ಕೇಂದ್ರಗಳು ತೀವ್ರ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ Severe Acute Malnutrition(SAM) ಹಾಗೂ ಸಾಧಾರಣ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ Moderate Acute Malnutrition (MAM) ಅವಶ್ಯಕತೆಗನುಗುಣವಾಗಿ ಕೆಳಕಂಡ ಆರೈಕೆ ಹಾಗೂ ಚಿಕಿತ್ಸೆ ಸೇವೆಗಳನ್ನು ಒದಗಿಸಲಾಗುತ್ತಿದೆ.<br>• ಮಕ್ಕಳಿಗೆ 14 ದಿನಗಳವರೆಗೆ ಉಚಿತ ಅಪೌಷ್ಟಿಕತೆ ನಿವಾರಣೆ ಸೇವೆಗಳು<br>• ಪೌಷ್ಟಿಕ ಆಹಾರ ನೀಡಿಕೆಯ ಮಹತ್ವದ ಬಗ್ಗೆ ಹಾಗೂ ಸ್ಥಳೀಯವಾಗಿ ಮನೆಯಲ್ಲಿಯೇ ಉತ್ತಮ ಪೌಷ್ಟಿಕ ಆಹಾರ ತಯಾರಿಕೆಯ ಬಗ್ಗೆ ತರಬೇತಿ.<br>• ತಾಯಂದಿರು/ಪೋಷಕರು ಹಾಗೂ ದಾಖಲಾದ ಅವರ ಮಕ್ಕಳಿಗೆ ಉಚಿತ ಊಟ ಔಷಧಿ ಹಾಗೂ ದಿನಗೂಲಿ ನಷ್ಟ ಭತ್ಯೆ ಸೌಲಭ್ಯಗಳು<br>• ತಾಯಂದಿರು/ಪೋಷಕರಿಗೆ ಆಪ್ತ ಸಮಾಲೋಚನೆ<br>• ಮಕ್ಕಳಿಗೆ ಆಟದ ರೂಪದ ಚಿಕಿತ್ಸಾ ಸೇವೆ<br><br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬಾಲ್ಯ ವಿವಾಹ ನಿಷೇದ ಕಾಯ್ದೆಯನ್ನು ಜಾರಿಗೊಳಿಸಲಾಗುತ್ತಿದೆ. |
| ಇ) | ಸಣ್ಣ ವಯಸ್ಸಿನ ಗರ್ಭಿಣಿಯ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆ ಸಮರ್ಪಕವಾಗಿ ಆಗದೇ ಇರುವುದರಿಂದ ಉಂಟಾಗುವ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: (ವಿವರ ನೀಡುವುದು) | |
| ಈ) | ಕೋಲಾರ ಜಿಲ್ಲೆಯಲ್ಲಿಯೇ ಕಳೆದ 8 ತಿಂಗಳಲ್ಲಿ 98 ಬಾಲ ಗರ್ಭಿಣಿಯರು ಇರುವ ಪ್ರಕರಣಗಳು ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದನ್ನು ತಡೆಗಟ್ಟುವಲ್ಲಿ ಅಧಿಕಾರಿಗಳ ಕರ್ತವ್ಯ ಲೋಪವೆಂಬುದು ಸರ್ಕಾರ ಒಪ್ಪಿಕೊಳ್ಳುವುದೇ: ಇದುವರೆವಿಗೂ ಎಷ್ಟು ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ: | ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ಜಿಲ್ಲೆಯಿಂದ ಪಡೆದ ಮಾಹಿತಿಯನ್ವಯ ಆರೋಗ್ಯ ಇಲಾಖೆಯ ಆರ್.ಸಿ.ಹೆಚ್. ಪೋರ್ಟಲ್ ರನ್ವಯ ಪಡೆದ ಮಾಹಿತಿಯನ್ನು ದಿನಾಂಕ:16.12.2023ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ.<br><br>ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಕ್ಕಳ ಸಹಾಯವಾಣಿ ಸಿಬ್ಬಂದಿಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಜಂಟಿ ಕಾರ್ಯಾಚರಣೆ ಕೈಗೊಂಡು 98 ಬಾಲ ಗರ್ಭಿಣಿಯರ ಗೃಹ ಭೇಟಿ ಮಾಡಿ ಜನ್ಮ ದಿನಾಂಕದ ದಾಖಲೆಗಳನ್ನು ಪರಿಶೀಲಿಸಿ ಸಂಬಂಧಪಟ್ಟವರ ವಿರುದ್ಧ ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆಯಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ.<br><br>ಮುಂದುವರೆದು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ ಇವರು ಕ್ಷೇತ್ರ ಮಟ್ಟದ ಬಾಲ್ಯ ವಿವಾಹ ನಿಷೇದಿಧಿಕಾರಿಗಳ ಪ್ರಗತಿ ಪರಿಶೀಲನಾ |

| | | |
|---|---|---|
| | | ಸಭೆಯನ್ನು ಕೈಗೊಂಡು ಗ್ರಾಮ, ಹೋಬಳಿ ಹಾಗೂ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಶಾಲಾ - ಕಾಲೇಜುಗಳನ್ನೊಳಗೊಂಡಂತೆ ಸಾರ್ವಜನಿಕರಲ್ಲಿಯೂ ವ್ಯಾಪಕ ಪ್ರಚಾರ ಕೈಗೊಂಡು ಇಂತಹ ಪ್ರಕರಣಗಳು ಮರುಕಳಿಸಬಾರದೆಂದು ಎಚ್ಚರಿಸಿ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವುದಾಗಿ ಸೂಚಿಸಲಾಗಿರುತ್ತದೆ. |
| ಉ) | ಬೆಂಗಳೂರು ಭಾಗದಲ್ಲಿ ಭಿಕ್ಷುಕರು ಸಹ ಈ ರೀತಿ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬೆಂಗಳೂರು ಭಾಗದಲ್ಲಿ ಭಿಕ್ಷುಕರು ಸಹ ಈ ರೀತಿ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳನ್ನು ತಡೆಗಟ್ಟಲು ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಭಿಕ್ಷಾಟನೆಗೊಳಪಟ್ಟ ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ರಕ್ಷಿಸಲು ನಿಯಮಿತವಾಗಿ ರಕ್ಷಣಾ ಕಾರ್ಯ ಕೈಗೊಂಡು ಬಾಲನ್ಯಾಯ ಕಾಯ್ದೆಯನ್ವಯ ಮಕ್ಕಳ ಕಲ್ಯಾಣ ಸಮಿತಿಯ ಆದೇಶದೊಂದಿಗೆ ಪ್ರಕರಣಕ್ಕೆ ಅನುಗುಣವಾಗಿ ಮಕ್ಕಳಿಗೆ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ. |
| ಊ) | ಇತ್ತೀಚೆಗೆ ರಾಜ್ಯದಲ್ಲಿಯೇ ಅತಿ ಹೆಚ್ಚು ಬಾಲ್ಯವಿವಾಹ ಪ್ರಕರಣಗಳು ಮಂಡ್ಯ ಜಿಲ್ಲೆಯಲ್ಲಿ ಮತ್ತು ಅತಿ ಹೆಚ್ಚು ಅಪ್ರಾಪ್ತ ಬಾಲಕಿಯರ ಗರ್ಭಿಣಿ ಪ್ರಕರಣಗಳು ಕೋಲಾರ ಜಿಲ್ಲೆಯಲ್ಲಿ ದಾಖಲಾಗಲು ಕಾರಣವೇನು: | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ:-**<br><br>ರಾಜ್ಯದಲ್ಲಿ ಪ್ರಸಕ್ತ ಸಾಲಿನ ಏಪ್ರಿಲ್-2023 ರಿಂದ ಜನವರಿ-2024 ರವರೆಗೆ ಒಟ್ಟು 609 ಬಾಲ್ಯವಿವಾಹ ಪ್ರಕರಣಗಳು ನಡೆದಿರುವುದು ವರದಿಯಾಗಿದ್ದು, ಇದರಲ್ಲಿ ಮಂಡ್ಯ ಜಿಲ್ಲೆಯಲ್ಲಿ 41 ಪ್ರಕರಣಗಳು ದಾಖಲಾಗಿರುತ್ತವೆ ಇಲಾಖೆಯಿಂದ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಹಾಗೂ ಬಾಗೀಧಾರ ಇಲಾಖೆ, ಬಾಲ್ಯವಿವಾಹ ನಿಷೇಧಾಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು, ಧಾರ್ಮಿಕ ಮುಖಂಡರು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಅರಿವು ಮೂಡಿಸುವ ತರಬೇತಿ ಮತ್ತು ಕಾರ್ಯಕ್ರಮಗಳನ್ನು ಆಯೋಜಿಸ ಲಾಗುತ್ತಿದೆ. ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ಪರಿಣಾಮವಾಗಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿವೆ.<br><br>**ಮಕ್ಕಳ ರಕ್ಷಣಾ ನಿರ್ದೇಶನಾಲಯ:-**<br>ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಪಡೆದ ಮಾಹಿತಿಯನ್ವಯ ಈ ಕೆಳಕಂಡ ಕಾರಣಗಳಿಂದ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿರುವುದಾಗಿ ವರದಿ ನೀಡಿರುತ್ತಾರೆ.<br><br>• **ಮಂಡ್ಯ ಜಿಲ್ಲೆ:** ಮಕ್ಕಳು ಹೆಚ್ಚು, ಪ್ರೀತಿ, ಪ್ರೇಮ ಮತ್ತು ಆಕರ್ಷಣೆಗೆ ಒಳಗಾಗಿರುವುದರಿಂದ ಹಾಗೂ ಮಕ್ಕಳ ಬಗ್ಗೆ ಪೋಷಕರ ನಿರ್ಲಕ್ಷ್ಯತನದಿಂದ ಓಡಿ ಹೋಗಿ ಬಾಲ್ಯವಿವಾಹವಾಗುತ್ತಿರುವ ಪ್ರಕರಣಗಳು ಹಾಗೂ ಪೋಷಕರಿಗೆ ಈ ಬಗ್ಗೆ ಮಾಹಿತಿಯು ತಿಳಿದು ಬಂದ ಸಂದರ್ಭದಲ್ಲಿ ಕಾನೂನಿನ ನೆರವನ್ನು ಪಡೆಯುವ |

| | | |
|---|---|---|
| | | ಬದಲಾಗಿ ತಮ್ಮ ಮಕ್ಕಳಿಗೆ ಬಾಲ್ಯ ವಿವಾಹಕ್ಕೆ ಒಳಪಡಿಸುತ್ತಿರುವುದರಿಂದ, ಇಂತಹ ಪ್ರಕರಣಗಳು ಹೆಚ್ಚುತ್ತಿರುವುದು ಕಂಡುಬಂದಿದೆ.<br><br>**ಕೋಲಾರ ಜಿಲ್ಲೆ:** ಕೋಲಾರ ಜಿಲ್ಲೆಯು ಆಂಧ್ರ ಪ್ರದೇಶ ಮತ್ತು ತಮಿಳನಾಡು ರಾಜ್ಯಗಳೊಂದಿಗೆ ಗಡಿಯನ್ನು ಹೊಂದಿದ್ದು, ಅಂತರ್ ರಾಜ್ಯ ವಿವಾಹ ಪ್ರಕರಣಗಳಿಂದ ಅಪ್ರಾಪ್ತ ಬಾಲಕಿಯರ ಗರ್ಭಿಣಿ ಪ್ರಕರಣಗಳು ಹೆಚ್ಚಾಗುತ್ತಿರುವುದಾಗಿ ವರದಿ ನೀಡಿರುತ್ತಾರೆ. |
| ಖ) | ರಾಜ್ಯದಲ್ಲಿ ಬಾಲ್ಯವಿವಾಹ ಮತ್ತು ಅಪ್ರಾಪ್ತ ಬಾಲಕಿಯರ ಗರ್ಭಿಣಿ ವಿಷಯದ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ: ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ? | **<u>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ</u>**<br><br>ರಾಜ್ಯದಲ್ಲಿ ಬಾಲ್ಯ ವಿವಾಹ ವಿಷಯದ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.<br>• ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ, ಭಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯ ಸಮರ್ಪಕ ಅನುಷ್ಠಾನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.<br>• ಚುನಾಯಿತ ಪ್ರತಿನಿಧಿಗಳು, ಕಲ್ಯಾಣ ಮಂಟಪ/ ಪ್ರಿಂಟಿಂಗ್ ಪ್ರೆಸ್ ಮಾಲೀಕರು, ಧಾರ್ಮಿಕ ಮುಖಂಡರು, ಸಾಮೂಹಿಕ ವಿವಾಹ ಸಂಘಟಕರಲ್ಲಿ ಜಾಗೃತಿ ಮೂಡಿಸಲು ತರಬೇತಿ ಮತ್ತು ಸಂವೇದನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>• 2021-22ನೇ ಸಾಲಿನಲ್ಲಿ "ಅಭಿಯಾನ" ರೂಪದಲ್ಲಿ "ಬಾಲ್ಯ ವಿವಾಹ ಅಭಿಯಾನ" ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿ ರಾಜ್ಯಾದ್ಯಂತ ಬಾಲ್ಯ ವಿವಾಹ ನಿಷೇಧದ ಕುರಿತು ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ "ವೀಡಿಯೋ ಆನ್ ವೀಲ್ಸ್"ಎಂಬ ಕಾರ್ಯಕ್ರಮವನ್ನು 788 ಹೋಬಳಿಗಳು ಮತ್ತು ಬೆಂಗಳೂರು (ನಗರ) ಜಿಲ್ಲೆಯ 7 BBMP ವಲಯಗಳಲ್ಲಿ ಒಟ್ಟು 3350 ವೀಡಿಯೊಗಳನ್ನು ಪ್ರದರ್ಶಿಸಲಾಗಿದೆ.<br>• 2021-22 ನೇ ಸಾಲಿನಲ್ಲಿ National Family Health Survey (NHFS) ಸರ್ವೆ ಪ್ರಕಾರ ಬಾಲ್ಯವಿವಾಹ ಹೆಚ್ಚಾಗಿರುವ 26 ಜಿಲ್ಲೆಗಳಲ್ಲಿ ಒಂದು ತಿಂಗಳ ವರೆಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯ ಕುರಿತು ಅರಿವು ಮೂಡಿಸಲು 911 ಬಸ್‌ಗಳಿಗೆ ಬಸ್ ಬ್ರ್ಯಾಂಡಿಂಗ್ ಮಾಡಲಾಗಿದೆ.<br>• ಯುವ ಸಮುದಾಯಕ್ಕೆ ಬಾಲ್ಯ ವಿವಾಹದ ದುಷ್ಪರಿಣಾಮಗಳ ಮತ್ತು ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸಲು ಬೆಳಗಾವಿ, ಚಾಮರಾಜನಗರ, ಯಾದಗಿರಿ ಮತ್ತು ತುಮಕೂರು ಜಿಲ್ಲೆಗಳಲ್ಲಿ "ಯುವ ಮೇಳ"ವನ್ನು ಆಯೋಜಿಸ ಲಾಗಿದೆ.<br>• ಬಸ್ ಬ್ರ್ಯಾಂಡಿಂಗ್, ಗೋಡೆ ಬರಹ, ರೇಡಿಯೋ ಮತ್ತು ಟಿವಿ, ಮಾಹಿತಿ ಸ್ಪಾಟ್ಸ್, ಬೀದಿ ನಾಟಕಗಳು, ಸಾರ್ವಜನಿಕ ಸ್ಥಳಗಳು, ಶಾಲೆಗಳು ಮತ್ತು ಧಾರ್ಮಿಕ ಸ್ಥಳಗಳಲ್ಲಿ ಪೋಸ್ಟರ್ / ಶಾಸನಬದ್ಧ ಬೋರ್ಡ್‌ಗಳ ಪ್ರದರ್ಶನದ ಮೂಲಕ ನಿಯಮಿತವಾಗಿ ಜಾಗೃತಿ ಮೂಡಿಸಲಾಗುತ್ತಿದೆ.<br><br>KARNAPEX -2024- ರಾಜ್ಯ ಮಟ್ಟದ ಅಂಚೆಚೀಟಿಗಳ ಸಂಗ್ರಹದ ಪ್ರದರ್ಶನದ ಸಂದರ್ಭದಲ್ಲಿ ಅಂಚೆ ಇಲಾಖೆಯ ಮೂಲಕ |

| | | |
|---|---|---|
| | | "ಬಾಲ್ಯ ವಿವಾಹ ನಿಷೇಧ ಕಾರ್ಯಕ್ರಮದ ಅನುಷ್ಠಾನ" ಕುರಿತು ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಲಾಗಿದೆ.<br><br>**ಮಕ್ಕಳ ರಕ್ಷಣಾ ನಿರ್ದೇಶನಾಲಯ:-**<br>ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಶಾಲಾ ಕಾಲೇಜುಗಳಲ್ಲಿ ಮತ್ತು ಭಾಗೀದಾರರಲ್ಲಿ 18 ವರ್ಷ ತುಂಬುವ ಮೊದಲೇ ಸಣ್ಣ ವಯಸ್ಸಿನಲ್ಲೇ ಹೆಣ್ಣು ಮಕ್ಕಳು ತಾಯಿಯಾಗುವುದರಿಂದ ಎದುರಿಸಬೇಕಾದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>ಅರಿವು ಮೂಡಿಸಲು ಎಲ್ಲಾ ಜಿಲ್ಲೆಗಳಲ್ಲೂ ಡಿಜಿಟಲ್ ವಾಲ್ ಪೈಂಟಿಂಗ್, ಬಸ್ ಬ್ರ್ಯಾಂಡಿಂಗ್ ಅಲ್ಲದೇ ಪೋಸ್ಟರ್‌ಗಳನ್ನು ಸಿದ್ಧಪಡಿಸಿ ಅಳವಡಿಸಲಾಗಿದೆ.<br>ಮೆಟ್ರೋಗಳಲ್ಲಿ ಡಿಸ್‌ಪ್ಲೇ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೂ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಗ್ರಾಮ್‌ಗಳಲ್ಲಿ ಜಾಗೃತಿ ಮೂಡಿಸುವ ಕ್ರಮ ಕೈಗೊಳ್ಳಲಾಗಿದೆ. |

ಮಮಇ 32 ಮಮಅ 2024

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

# ಅನುಬಂಧ

**ವಿಧಾನ ಪರಿಷತ್ತಿನ ಚುಕ್ಕೆ ಗುರುತಿಸ ಪ್ರಶ್ನೆ ಸಂಖ್ಯೆ:1042**
**(ಬಾಲಗರ್ಭಿಣಿಯರ ಮತ್ತು ಬಾಲತಾಯಂದಿರ ಜಿಲ್ಲಾವಾರು ಮಾಹಿತಿ)**

| ಕ್ರ.ಸಂ | ಜಿಲ್ಲೆಗಳು | 2021 | 2022 | 2023 | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 0 | 0 | 2 | 2 |
| 2 | ಬೆಂಗಳೂರು(ಗ್ರಾ) | 0 | 1 | 10 | 11 |
| 3 | ಬೆಂಗಳೂರು ನಗರ | 8 | 11 | 36 | 55 |
| 4 | ಬೆಳಗಾವಿ | 6 | 8 | 8 | 22 |
| 5 | ಬಳ್ಳಾರಿ | 1 | 2 | 3 | 6 |
| 6 | ಬೀದರ್ | 4 | 4 | 5 | 13 |
| 7 | ಬಿಜಾಪುರ | 6 | 6 | 24 | 36 |
| 8 | ಚಾಮರಾಜನಗರ | 1 | 7 | 18 | 26 |
| 9 | ಚಿಕ್ಕಬಳ್ಳಾಪುರ | 8 | 14 | 22 | 44 |
| 10 | ಚಿಕ್ಕಮಗಳೂರು | 6 | 6 | 2 | 14 |
| 11 | ಚಿತ್ರದುರ್ಗ | 11 | 4 | 24 | 39 |
| 12 | ದಾವಣಗೆರೆ | 0 | 0 | 0 | 0 |
| 13 | ಧಾರವಾಡ | 0 | 2 | 3 | 5 |
| 14 | ಗದಗ | 1 | 95 | 34 | 130 |
| 15 | ಕಲಬುರಗಿ | 1 | 1 | 1 | 3 |
| 16 | ಹಾಸನ | 1 | 3 | 5 | 9 |
| 17 | ಹಾವೇರಿ | 2 | 10 | 8 | 20 |
| 18 | ಉತ್ತರ ಕನ್ನಡ | 19 | 19 | 18 | 56 |
| 19 | ಕೊಡಗು | 4 | 4 | 3 | 11 |
| 20 | ಕೋಲಾರ | 2 | 6 | 64 | 72 |
| 21 | ಕೊಪ್ಪಳ | 4 | 1 | 5 | 10 |
| 22 | ಮಂಡ್ಯ | 18 | 10 | 17 | 45 |
| 23 | ದಕ್ಷಿಣಕನ್ನಡ | 16 | 12 | 16 | 44 |
| 24 | ಮೈಸೂರು | 18 | 23 | 20 | 61 |
| 25 | ರಾಯಚೂರು | 4 | 3 | 3 | 10 |
| 26 | ರಾಮನಗರ | 0 | 5 | 24 | 29 |
| 27 | ಶಿವಮೊಗ್ಗ | 17 | 27 | 40 | 84 |
| 28 | ತುಮಕೂರು | 20 | 21 | 32 | 73 |
| 29 | ಉಡುಪಿ | 0 | 1 | 2 | 3 |
| 30 | ಯಾದಗಿರಿ | 0 | 0 | 0 | 0 |
| 31 | ವಿಜಯನಗರ | 0 | 0 | 53 | 53 |
| | ಒಟ್ಟು | 178 | 306 | 502 | 986 |